# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಸದಸ್ಯರ ಹೆಸರು | : | ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 37 |
| ಉತ್ತರಿಸುವ ಸಚಿವರು | : | ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು. |
| ಉತ್ತರಿಸಬೇಕಾದ ದಿನಾಂಕ | : | 04-07-2023. |

| ಕ್ರಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಬೆಳಗಾವಿ, ಬಾಗಲಕೋಟೆ ಮತ್ತು ವಿಜಯಪುರ ಜಿಲ್ಲೆಗಳಲ್ಲಿ ನೂತನ ಜವಳಿ ನೀತಿಯಲ್ಲಿ ಆರಂಭಗೊಂಡಿರುವ ಹೊಲಿಗೆ ತರಬೇತಿ ಕೇಂದ್ರಗಳ ಸಂಖ್ಯೆ ಎಷ್ಟು; ಈ ತರಬೇತಿ ಕೇಂದ್ರಗಳಿಗೆ ಸರ್ಕಾರ ನೀಡುತ್ತಿರುವ ಅನುದಾನವೆಷ್ಟು; ಕಳೆದ ಒಂದು ವರ್ಷದಲ್ಲಿ ಎಷ್ಟು ಜನ ನಿರುದ್ಯೋಗಿಗಳು ಈ ಕೇಂದ್ರಗಳಲ್ಲಿ ತರಬೇತಿ ಹೊಂದಿರುತ್ತಾರೆ; | ಬೆಳಗಾವಿ, ಬಾಗಲಕೋಟೆ ಮತ್ತು ವಿಜಯಪುರ ಜಿಲ್ಲೆಗಳಲ್ಲಿ ನೂತನ ಜವಳಿ ನೀತಿಯಲ್ಲಿ ಆರಂಭಗೊಂಡಿರುವ ಹೊಲಿಗೆ ತರಬೇತಿ ಕೇಂದ್ರಗಳ ವಿವರ ಈ ಕೆಳಕಂಡಂತಿದೆ. (see table below) ಈ ತರಬೇತಿ ಕೇಂದ್ರಗಳಿಗೆ ಸರ್ಕಾರಿ ತರಬೇತಿ ಕೇಂದ್ರಕ್ಕೆ ಪ್ರತಿ ಅಭ್ಯರ್ಥಿಗೆ ರೂ.9,500/- ಹಾಗೂ ಖಾಸಗಿ ತರಬೇತಿ ಕೇಂದ್ರಕ್ಕೆ ಪ್ರತಿ ಅಭ್ಯರ್ಥಿಗೆ ರೂ.11,000/-ಗಳಂತೆ ಅನುದಾನ ನೀಡಲು ಅವಕಾಶ ಇರುತ್ತದೆ. ತರಬೇತಿ ಕಾರ್ಯಕ್ರಮ ನೀಡುವ ಸರ್ಕಾರಿ/ಖಾಸಗಿ ಸಂಸ್ಥೆಯ ವೆಚ್ಚದ ವಿವರವನ್ನು ಅನುಬಂಧದಲ್ಲಿ ಒದಗಿಸಿದೆ.<br><br>ಕಳೆದ ಒಂದು ವರ್ಷದಲ್ಲಿ ಈ ಮೇಲ್ಕಾಣಿಸಿದ ಜಿಲ್ಲೆಗಳಲ್ಲಿ ಹಾಗೂ ರಾಜ್ಯದಲ್ಲಿನ ಯಾವುದೇ ಸರ್ಕಾರಿ/ಖಾಸಗಿ ಎಸ್.ಎಂ.ಓ ತರಬೇತಿ ಕೇಂದ್ರಗಳಿಗೆ ತರಬೇತಿಯನ್ನು ನೀಡಿರುವುದಿಲ್ಲ. |
| (ಆ) | ರಾಜ್ಯವು ಗಾರ್ಮೆಂಟ್ಸ್ ಉದ್ಯಮದ ಕೇಂದ್ರವಾಗಿದ್ದು, ಈ ಗಾರ್ಮೆಂಟ್ಸ್ ಕಂಪನಿಗಳಿಗೆ ಉನ್ನತ ದರ್ಜೆಯ ಟೈಲರ್‌ಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಕೊರತೆಯನ್ನು ನಿವಾರಿಸುವ ಮೂಲಕ ನಿರುದ್ಯೋಗಿಗಳಿಗೆ ಉದ್ಯೋಗ ದೊರೆಯುವಂತಹ ನಿಟ್ಟಿನಲ್ಲಿ ಹೊಲಿಗೆ ತರಬೇತಿ ಕೇಂದ್ರಗಳನ್ನು ಸಂಪೂರ್ಣವಾಗಿ ಸರ್ಕಾರವೇ ವಹಿಸಿಕೊಂಡು ಆಸಕ್ತ ನಿರುದ್ಯೋಗಿಗಳಿಗೆ ತರಬೇತಿ ನೀಡುವ ಕುರಿತು ಸರ್ಕಾರದ ನಿಲುವೇನು? | ರಾಜ್ಯವು ಗಾರ್ಮೆಂಟ್ಸ್ ಉದ್ಯಮದ ಕೇಂದ್ರವಾಗಿದ್ದು, ಈ ಗಾರ್ಮೆಂಟ್ಸ್ ಕಂಪನಿಗಳಿಗೆ ಉನ್ನತ ದರ್ಜೆಯ ಟೈಲರ್‌ಗಳ ಕೊರತೆ ಇರುವುದು ಇಲಾಖೆಯ ಗಮನಕ್ಕೆ ಬಂದಿರುವುದಿಲ್ಲ ಹಾಗೂ ನಿರುದ್ಯೋಗಿಗಳಿಗೆ ಉದ್ಯೋಗ ದೊರೆಯುವಂತಹ ನಿಟ್ಟಿನಲ್ಲಿ ಹೊಲಿಗೆ ತರಬೇತಿ ಕೇಂದ್ರಗಳನ್ನು ಸಂಪೂರ್ಣವಾಗಿ ಇಲಾಖೆಯೇ ವಹಿಸಿಕೊಂಡು ಆಸಕ್ತ ನಿರುದ್ಯೋಗಿಗಳಿಗೆ ತರಬೇತಿ ನೀಡುವ ಕುರಿತು ಸದ್ಯಕ್ಕೆ ಯಾವುದೇ ಪ್ರಸ್ತಾವನೆ ಇರುವುದಿಲ್ಲ. |

Table in answer (ಅ):

| ಜಿಲ್ಲೆ | ಸರ್ಕಾರಿ ತರಬೇತಿ ಕೇಂದ್ರ | ಖಾಸಗಿ ತರಬೇತಿ ಕೇಂದ್ರ | ಒಟ್ಟು |
|---|---|---|---|
| ಬೆಳಗಾವಿ | 08 | 07 | 15 |
| ಬಾಗಲಕೋಟೆ | 09 | 03 | 12 |
| ವಿಜಯಪುರ | 08 | 04 | 12 |

ಸಂಖ್ಯೆ: CI 75 JAKE 2023

(ಶಿವಾನಂದ ಎಸ್. ಪಾಟೀಲ)
ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು

# ಅನುಬಂಧ

## ತರಬೇತಿ ಕಾರ್ಯಕ್ರಮ ನೀಡುವ ಸರ್ಕಾರಿ / ಖಾಸಗಿ ಸಂಸ್ಥೆಯ ವೆಚ್ಚ ವಿವರ ಪಟ್ಟಿ.

(ರೂ.ಗಳಲ್ಲಿ)

| ಕ್ರ.ಸಂ | ತರಬೇತಿ ವಿಧ | ತರಬೇತಿ ಅವಧಿ | ಶಿಷ್ಯ ವೇತನ | ಕಚ್ಚಾ ಮಾಲು | ತರಬೇತಿ ಕೇಂದ್ರಕ್ಕೆ ನೀಡುವ ತರಬೇತಿ ವೆಚ್ಚ | | ಒಟ್ಟು ಘಟಕ ವೆಚ್ಚ | |
|---|---|---|---|---|---|---|---|---|
| | | | | | ಸರ್ಕಾರಿ | ಖಾಸಗಿ | ಸರ್ಕಾರಿ | ಖಾಸಗಿ |
| 1 | ಸೀವಿಂಗ್ ಮೆಷಿನ್ ಆಪರೇಟರ್ (SMO) | 45 ದಿನಗಳು | 3500 | 1000 | 5000 | 6500 | 9500 | 11000 |
| 2 | ಕೈಮಗ್ಗ ನೇಯ್ಗೆ | 45 ದಿನಗಳು | 3500 | 1000 | 5000 | 6500 | 9500 | 11000 |
| 3 | ವಿದ್ಯುತ್ ಮಗ್ಗ ನೇಯ್ಗೆ | 45 ದಿನಗಳು | 3500 | 1000 | 5000 | 6500 | 9500 | 11000 |